ಡಿ ಡಬ್ಲ್ಯು 01

*ದಿನಾಂಕ:04-02-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.*

**ಅರ್ಜಿ ಮೇಲಿನ ಆದೇಶದ ಮೇರೆಗೆ ಮುಂದುವರಿದ ಮುಖ್ಯವಿಚಾರಣೆ ಃ**

**ಪ್ರತಿವಾದಿ ಪರ ವಕೀಲರಿಂದಃ**

ನಿಡಿ 29 ರಿಂದ 32 ನಾಲ್ಕು ಮ್ಯೂಟೇಶನ್ ಗಳನ್ನು

ನಿಡಿ 33 ಮತ್ತು 34 ಎರಡು ಆರ್ ಟಿ ಸಿ ಗಳನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

**ಪಾಟೀ ಸವಾಲುಃ ವಾದಿ ಪರವಾಗಿಃ**

ದಾವಾ ಆಸ್ತಿ ಮೂಲತಃ ವಾದಿಗಳ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿ.

1. ನಂಜುಂಡಪ್ಪನವರು ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಪರಮೇಶ್ವರಪ್ಪ, ಶಿವಲಿಂಗಪ್ಪ, ಓಂಕಾರಪ್ಪ, ನಂಜುಡಂಪ್ಪ ಹಾಗೂ ರಾಜಪ್ಪ ಆಸ್ತಿಗಳನ್ನು ವಿಭಾಗ ಮಾಡಿಕೊಂಡ ಬಗ್ಗೆ ದಾಖಲೆಗಳನ್ನು ನೋಡಿದ್ದೀರಾ?

ಉಃ ದಾಖಲೆಗಳನ್ನು ಪತ್ರದ ಮೂಲ ನೋಡಿದ್ದೇನೆ.

2. ಅವು ಯಾವ ಪತ್ರಗಳು?

ಉಃ ನಂಜುಂಡಪ್ಪನವರ ಹಿಸ್ಸೆ ಮೂಲಕ ನಾಗಪ್ಪನವರಿಗೆ ಕ್ರಯದ ಮೂಲಕ ಬಂದಿರುವುದು.

3. ನಾನು ಕೇಳಿದ ಪ್ರಶ್ನೆ ನಂಜುಂಡಪ್ಪ ಮತ್ತು ಪರಮೇಶ್ವರಪ್ಪನವರು ಮಾಡಿಕೊಂಡ ಹಿಸ್ಸೆ ಪತ್ರ ಎಂದರೆ ?

ಉಃ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ.

4. ನಂಜುಂಡಪ್ಪನವರಿಗೆ ಹಿಸ್ಸೆಯಲ್ಲಿ ಎಷ್ಟು ಆಸ್ತಿ ಬಂದಿತ್ತು ನಿಮಗೆ ಗೊತ್ತಾ?

ಉಃ 1 ಎಕರೆ 5 ಗುಂಟೆ ಬಂದಿತ್ತು.

5. ಶಿವಲಿಂಗಪ್ಪ, ಓಂಕಾರಪ್ಪ, ಪರಮೇಶ್ವರಪ್ಪ ಎಂಬುವರು ವಾದಿಗಳು ಎಂದರೆ ಗೊತ್ತಾ?

ಉಃ ಸಾಕ್ಷಿಯು ಹೌದು ಎನ್ನುತ್ತಾರೆ.

6. ವಾದಿಯರಿಗೆ ಎಷ್ಟು ಆಸ್ತಿ ವಿಭಾಗದಲ್ಲಿ ಬಂದಿದೆ ಎಂದು ಗೊತ್ತಾ?

ಉಃ ನನಗೆ ಗೊತ್ತಿಲ್ಲ.

*7.* ನಂಜುಂಡಪ್ಪ ಮತ್ತು ಅವರ ಸಹೋದರರ ನಡುವೆ ಹಿಸ್ಸೆಯಾಯ್ತು ಎಂದು ನಿಮ್ಮ ಮುಖ್ಯವಿಚಾರಣೆಯಲ್ಲಿ ಹೇಳಿದ್ದೀರಿ, ಆ ಬಗ್ಗೆ ಯಾರ್ಯಾರಿಗೆ ಎಷ್ಟು ಹಿಸ್ಸೆ ಬಂದಿದೆ ಎಂದು ಗೊತ್ತಿದೀಯಾ ?

ಉತ್ತರ : ಗೊತ್ತಿದೆ. *2* ಎಕರೆ *16* ಗುಂಟೆಯಲ್ಲಿ ನಂಜುಂಡಪ್ಪನವರ ಹಿಸ್ಸೆಗೆ ಬಂದ *1* ಎಕರೆ *5* ಗುಂಟೆ ಜಮೀನಿನಲ್ಲಿ ಹೆಚ್ ಎನ್ ಗೋವಿಂದಪ್ಪನವರಿಗೆ *22* ವರೆ ಗುಂಟೆ, ಹೆಚ್ ಆರ್ ನಾಗಪ್ಪನವರಿಗೆ *22* ವರೆ ಗುಂಟೆ ಹಂಚಿಕೆಯಾಗಿದ್ದು, ಉಳಿದ *1* ಎಕರೆ *11* ಗುಂಟ ಜಮೀನನ್ನು ಪರಮೇಶ್ವರಪ್ಪನವರಿಗೆ *13* ಗುಂಟೆ, ಶಿವಲಿಂಗಪ್ಪನವರಿಗೆ *25* ಗುಂಟೆ, ಓಂಕಾರಪ್ಪನವರಿಗೆ *13* ಗುಂಟೆ ದಿಃ *10-03-2000* ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ.

*8.* ಎಷ್ಟನೇ ತಾರೀಖಿನಲ್ಲಿ ವಿಭಾಗ ಪತ್ರ ಆಗಿದೆ?

ಉಃ ದಿಃ *19-06-2001* ರಲ್ಲಿ ವಿಭಾಗ ಮಾಡಲಾಗಿದೆ.

*9.* ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ?

ಉಃ ಹೌದು.

ನಿಮ್ಮ ಪ್ರಕಾರ ಅವರು ವಿಭಾಗ ಮಾಡಿಕೊಂಡ ದಾಖಲೆ ಎಂದು ಹೇಳುತ್ತೀರಾ ಎಂದು ನಿಪಿ *10* ಅನ್ನು ತೋರಿಸಿದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಪಿ *10* ರ ಪ್ರಕಾರ ಯಾವುದೇ ವಿಭಾಗ ಆಗಿಲ್ಲ ಎಂದರೆ ಸಾಕ್ಷಿ ಅದು ನಮಗೆ ಗೊತ್ತಿಲ್ಲ ಆದರೆ ದಾಖಲೆ ಇದೆ ಎನ್ನುತ್ತಾರೆ. ಅದು ವಿಭಾಗ ದಾಖಲೆ ಅಲ್ಲ ಎಂದರೆ ಗೊತ್ತಿಲ್ಲ. ಕಾಲಪರಿಮಿತಿ ಎಂದರೆ ಏನು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಕಾಲಪರಿಮಿತಿಯ ಬಗ್ಗೆ ಹೇಳಿದ್ದೀರಾ ಎಂದರೆ ಗೊತ್ತಿಲ್ಲ. ಪರಮೇಶ್ವರಪ್ಪ, ಓಂಕಾರಪ್ಪನವರಿಗೆ ಈ ವಿಷಯ ತಿಳಿಸಿದ್ದೀರಾ ಎಂದರೆ ಸಾಕ್ಷಿದಾರರು ಆ ದಾಖಲೆ ಗೊತ್ತಿಲ್ಲ, ನಾನು ಹುಟ್ಟೇ ಇಲ್ಲ ಎಂದು ಹೇಳುತ್ತಾರೆ. ದಾಖಲೆ ಹೊರತುಪಡಿಸಿ ನಿಮಗೆ ಯಾವುದೇ ಮಾಹಿತಿ ಇಲ್ಲವೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಮ್ಮ ಮುಖ್ಯವಿಚಾರಣೆಯಲ್ಲಿ ವಾದಿಗೆ ಕಾನೂನುಬದ್ದ ನೋಟೀಸು ಇದೆ ಎಂದು ಹೇಳಿದ್ದೀರಿ ಅದು ಏನು ಎಂದು ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಅಜ್ಜ ಖರೀದಿ ಮಾಡಿದ ದಾಖಲೆಯಲ್ಲಿ ವಾದಿಗಳ ಸಹಿ ಇದೆಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದಿಯರ ಭಾಗದಲ್ಲಿ ನೀವು ಹಕ್ಕನ್ನು ಕೇಳುತ್ತಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ಕೇಸನ್ನು ಯಾವ ಕಾರಣಕ್ಕಾಗಿ ಹಾಕಿದ್ದಾರೆಂದು ಗೊತ್ತಿದೆಯಾ?

ವಾದಿಯರ ಅಣ್ಣತಮ್ಮಂದಿರಾದ ರಾಜಪ್ಪನವರು ಬಸಪ್ಪನವರಿಗೆ *1976* ರಲ್ಲಿ ಕ್ರಯ ಮಾಡಿದ್ದಾರೆಂದು ದಾಖಲೆ ಇರುತ್ತದೆ. ಅದು ಸರ್ವೆ ನಂಬರು ತಪ್ಪಾಗಿರುವುದರಿಂದ

ವಾದಿಗಳಿಗೂ, ಬಸಪ್ಪನವರಿಗೂ ಜಗಳ ಆಗಿರುವುದರಿಂದ ಈ ಕೇಸು ದಾಖಲು ಮಾಡಲಾಗಿದೆ ಎಂದು ಹೇಳುತ್ತಾರೆ.

ಕೇಸಿನಲ್ಲಿ ತಕರಾರು ಏನು ಹಾಕಲಾಗಿದೆ ಎಂದರೆ ಗೊತ್ತಿಲ್ಲ. ಸರ್ವೆ ನಂಃ ***10/1*** ರಲ್ಲಿ ಹಿಸ್ಸಾ ಕೇಳುವ ಹಕ್ಕು ಇದೆ ಎಂದರೆ ಸರಿ. ಅವರಿಗೆ ***10/1*** ರಲ್ಲಿ ಹಿಸ್ಸೆ ಕೊಡಲು ನಿಮ್ಮದೇನಾದರೂ ತಕರಾರು ಇದೆಯಾ ಎಂದರೆ ಸಾಕ್ಷಿದಾರರು ನಮಗೆ ಮಾರಾಟ ಮಾಡಿರುವ ಹಿಸ್ಸೆ ಬಿಟ್ಟು ಉಳಿದ ಜಾಗದಲ್ಲಿ ಕೊಡಬಹುದು ಎನ್ನುತ್ತಾರೆ. ವಾದಿಗಳು ನಮಗೆ ಯಾವುದೇ ಸ್ವತ್ತು ಮಾರಾಟ ಮಾಡಿಲ್ಲ ಎಂದರೆ ಸರಿ. ವಾದಿಗಳ ಹಿಸ್ಸೆಗೆ ಬರುವ ಆಸ್ತಿಯನ್ನು ಕೇಳಲು ನಮಗೆ ಹಕ್ಕು ಇರುವುದಿಲ್ಲ ಎಂದರೆ ಸರಿ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ತಕರಾರು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಂಜುಂಡಪ್ಪನ ಹಿಸ್ಸೆಯನ್ನು ಮಾತ್ರ ಖರೀದಿ ಮಾಡಲು ಅರ್ಹರು ಅದಕ್ಕಿಂತ ಹೆಚ್ಚಿಗೆ ಕೇಳಲು ಆಗುವುದಿಲ್ಲ ಎಂದರೆ ಸಾಕ್ಷಿದಾರರು ನಮ್ಮ ಹಿಸ್ಸೆ ನಮಗೆ ಎನ್ನುತ್ತಾರೆ. ಸದರಿ ಆಸ್ತಿಗಳಲ್ಲಿ ಯಾವುದೇ ಹಿಸ್ಸೆ ಇಲ್ಲವೆಂದರೆ ಸರಿಯಲ್ಲ. ವಾದಿಗಳ ಕುಟುಂಬಕ್ಕೆ ನಾನು ಸಂಬಂದ ಪಡದವಳಾಗಿದ್ದರಿಂದ ಹಿಸ್ಸೆಯನ್ನು ಕೋರಲು ಆಗುವುದಿಲ್ಲ ಎಂದರೆ ಸಾಕ್ಷಿದಾರರು ಹಕ್ಕು ಇದೆ ಎನ್ನುತ್ತಾರೆ. ವಾದಿಗಳಿಗೆ ಹಿಸ್ಸೆ ಕೊಡುವುದನ್ನು ತಪ್ಪಿಸಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬಸಪ್ಪನವರು ನಮ್ಮ ಕುಟುಂಬಸ್ಥರಲ್ಲ. ಬಸಪ್ಪನವರ ಹಕ್ಕನ್ನು ನಾವು ಸಂರಕ್ಷಣೆ ಮಾಡುವ ಅಗತ್ಯ ಇಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಬಸಪ್ಪನ ಹಕ್ಕಿನ ಸಂರಕ್ಷಣೆಯ ಬಗ್ಗೆ ಹೇಳಿಲ್ಲ. ಮುಖ್ಯವಿಚಾರಣೆಯಲ್ಲಿರುವ ಪ್ಯಾರಾ ನಂಃ ***10*** ರಲ್ಲಿರುವ ವಿಷಯವನ್ನು ನಾನೇ ಹೇಳಿ ಬರೆಸಿರುತ್ತೇನೆ. ಬಸಪ್ಪನವರು ಯಾವತ್ತು ಖರೀದಿ ಮಾಡಿದ್ದಾರೆಂದು ಮಾಹಿತಿ ಇಲ್ಲ. ವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)***

**ಓ ಹೇ ಕೇ ಸ ಇ ಎ ಒ**

ಸಹಿ/-

**(ಎಂ ಸಿ ನಂಜೇಗೌಡ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ತರೀಕೆರೆ.**